**<u>1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>**

**<u>ಅಸಲು ದಾವೆ. ಸಂಖ್ಯೆ:376/2012</u>**

ಡಿ.ಡಬ್ಲ್ಯೂ:01 ಶ್ರೀ ರಾಮಶೇಖರರೆಡ್ಡಿ

**ಸಾಕ್ಷಿಯನ್ನು ದಿನಾಂಕಃ 04-07-2025 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**<u>ಮುಂದುವರೆದ ಪಾಟೀಸವಾಲು ಃ ವಾದಿಯ ಪರ ಶ್ರೀ.ಜಿ ಪಿ ವಕೀಲರಿಂದ</u>**

**1.** ಸಾಕ್ಷಿಗೆ ನಿಪಿ **47** ಪಹಣಿಯನ್ನು ತೋರಿಸಲಾಗಿ ಅದರಂತೆ ಐಟಂ ನಂ.**3** ದಾವಾ ಆಸ್ತಿ ಆದ ಸರ್ವೆ ನಂ.**34, 1965-66** ನೇ ಸಾಲಿನಿಂದ **1969-70** ನೇ ಸಾಲಿನವರೆಗೆ ನನ್ನ ತಂದೆ ಆದ ಜಿ ಆರ್ ಶ್ರೀ ರಾಮರೆಡ್ಡಿರವರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿ. ಸಾಕ್ಷಿಗೆ ನಿಪಿ.**48** ಪಹಣಿಯನ್ನು ತೋರಿಸಿ ಅದರಂತೆ ಐಟಂ ನಂ.**3** ಸರ್ವೆ ನಂ.**34** ಆಸ್ತಿಯು **1970-71** ನೇ ಸಾಲಿನಿಂದಿ **1975-76** ನೇ ಸಾಲಿನವರೆಗೆ ಮೊದಲು ನನ್ನ ತಂದೆಯಾದ ಜಿ ಆರ್ ಶ್ರೀರಾಮರೆಡ್ಡಿಯವರ ಹೆಸರಿನಲ್ಲಿದ್ದು ನಂತರ ಕೆ ಸಿ ರಾಮೇಗೌಡರ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸರಿ. ಸಾಕ್ಷಿಗೆ ನಿಪಿ.**55** ಪಹಣಿಯನ್ನು ತೋರಿಸಲಾಗಿ ಐಟಂ ನಂ.**5,** ಸರ್ವೆ ನಂ.**35, 1965-66** ನೇ ಸಾಲಿನಿಂದ **1969-70** ನೇ ಸಾಲಿನವರೆಗೆ ನನ್ನ ತಂದೆಯಾದ ಜಿ ಆರ್ ಶ್ರೀರಾಮರೆಡ್ಡಿರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಗೆ ನಿಪಿ **56** ಪಹಣಿಯನ್ನು ತೋರಿಸಿ ಅದರಂತೆ ಐಟಂ ನಂ.**5,** ಸರ್ವೆ ನಂ.**35** ಆಸ್ತಿಯು **1970-71** ನೇ ಸಾಲಿನಿಂದ **1975-76** ನೇ ಸಾಲಿನವರೆಗೆ ಮೊದಲು ನನ್ನ ತಂದೆ ಆದ ಜಿ ಆರ್ ಶ್ರೀರಾಮರೆಡ್ಡಿರವರ ಹೆಸರಿನಲ್ಲಿ ಇದ್ದು ನಂತರ ಕೆ ಸಿ ರಾಮೇಗೌಡರ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸರಿ.

**2.** ಸಾಕ್ಷಿಗೆ ನಿಪಿ.**82** ಪಹಣಿಯನ್ನು ತೋರಿಸಲಾಗಿ ಐಟಂ ನಂ.**7,** ಸರ್ವೆ ನಂ.**38, 1965-66** ನೇ ಸಾಲಿನಿಂದ **1969-70** ನೇ ಸಾಲಿನವರೆಗೆ ನನ್ನ ತಂದೆ ಆದ ಜಿ ಆರ್ ಶ್ರೀರಾಮರೆಡ್ಡಿರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಗೆ ನಿಪಿ.**83** ಪಹಣಿಯನ್ನು ತೋರಿಸಲಾಗಿ ಅದರಂತೆ ಐಟಂ ನಂ.**7,** ಸರ್ವೆ ನಂ.**38, 1970-71** ನೇ ಸಾಲಿನಿಂದ **1975-76** ನೇ ಸಾಲಿನವರೆಗೆ ನನ್ನ ತಂದೆ ಆದ ಜಿ ಆರ್ ಶ್ರೀರಾಮರೆಡ್ಡಿರವರ ಹೆಸರಿನಿಂದ ಕೆ ಸಿ ರಾಮೇಗೌಡರ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸರಿ. ಸಾಕ್ಷಿಗೆ ನಿಪಿ.**64** ಪಹಣಿಯನ್ನು ತೋರಿಸಲಾಗಿ ಐಟಂ ನಂ.**8,** ಸರ್ವೆ ನಂ.**36, 1965-66** ನೇ ಸಾಲಿನಿಂದ **1969-70** ನೇ ಸಾಲಿನವರೆಗೆ ನನ್ನ ತಂದೆ ಆದ ಜಿ ಆರ್ ಶ್ರೀರಾಮರೆಡ್ಡಿರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಗೆ ನಿಪಿ.**65** ಪಹಣಿಯನ್ನು ತೋರಿಸಲಾಗಿ ಅದರಂತೆ ಐಟಂ ನಂ.**8,** ಸರ್ವೆ ನಂ.**36, 1970-71** ನೇ ಸಾಲಿನಿಂದ **1975-76** ನೇ ಸಾಲಿನವರೆಗೆ ನನ್ನ ತಂದೆ ಆದ ಜಿ ಆರ್ ಶ್ರೀರಾಮರೆಡ್ಡಿರವರ ಹೆಸರಿನಿಂದ ಕೆ ಸಿ ರಾಮೇಗೌಡರ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸರಿ. ಸಾಕ್ಷಿಗೆ ನಿಪಿ. **66** ಪಹಣಿಯನ್ನು ತೋರಿಸಲಾಗಿ ಐಟಂ ನಂ.**8,** ಸರ್ವೆ ನಂ.**36, 1976-77** ನೇ ಸಾಲಿನಿಂದ **1985-86** ನೇ ಸಾಲಿನವರೆಗೆ ಸದರಿ ಕೆ ಸಿ ರಾಮೇಗೌಡರವರ ಹೆಸರಿನಿಂದ ಮುನಿವೆಂಕಟಪ್ಪ, ಅಂಗಾಂಡಹಳ್ಳಿ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಹೌದು . ಸಾಕ್ಷಿಗೆ ನಿಪಿ. **67** ಪಹಣಿಯನ್ನು ತೋರಿಸಲಾಗಿ ಐಟಂ ನಂ.**8,** ಸರ್ವೆ ನಂ.**36, 1986-87** ನೇ ಸಾಲಿನಿಂದ **1992-93** ನೇ ಸಾಲಿನವರೆಗೆ ಸದರಿ ಮುನಿವೆಂಕಟಪ್ಪ ಅಂಗಾಂಡಹಳ್ಳಿರವರ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಸಾಕ್ಷಿಗೆ ನಿಪಿ. **68** ಪಹಣಿಯನ್ನು ತೋರಿಸಲಾಗಿ ಐಟಂ ನಂ.**8,** ಸರ್ವೆ ನಂ.**36, 1993-94** ನೇ ಸಾಲಿನಿಂದ **1998-99** ನೇ ಸಾಲಿನವರೆಗೆ ಸದರಿ ಮುನಿವೆಂಕಟಪ್ಪ ರವರ ಹೆಸರಿಗೆ ಬರುತ್ತಿದೆ ಎಂದರೆ ಸರಿ.

**3.** ಸಾಕ್ಷಿಗೆ ನಿಪಿ. **69** ಪಹಣಿಯನ್ನು ತೋರಿಸಲಾಗಿ ಐಟಂ ನಂ.**8,** ಸರ್ವೆ ನಂ.**36, 1999-2000** ಸಾಲಿನಿಂದ **2001-2002** ನೇ ಸಾಲಿನವರೆಗೆ ಸದರಿ ಮುನಿವೆಂಕಟಪ್ಪ ರವರ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಸಾಕ್ಷಿಗೆ ನಿಪಿ. **69** ಪಹಣಿಯಲ್ಲಿ ಎಂ ಆರ್ **2/1978-79** ರ ಬಗ್ಗೆ ನಮೂದಿದೆ ಎಂದರೆ ಸರಿ. ಸಾಮಾನ್ಯವಾಗಿ ಕಂದಾಯ ದಾಖಲೆಗಳನ್ನು ಪಡೆಯುವ ಸಂದರ್ಭದಲ್ಲಿ ಅವುಗಳಿಗೆ ಸಂಬಂದ ಪಟ್ಟಂತೆ ಅರ್ಜಿಯನ್ನು ಕೊಟ್ಟು ನಂತರ ಅವರು ಅದನ್ನು ಪರಿಶೀಲಿಸಿ ದಾಖಲೆಗಳನ್ನು ಕೊಡುತ್ತಾರೆ ಎಂದರೆ ಸರಿ. ನಾನು ಈಗಾಗಲೇ ಹಾಜರುಪಡಿಸಿದ ದಾಖಲೆಗಳಿಗೆ ಸಂಬಂದ ಪಟ್ಟಂತೆ **2020** ನೇ ಸಾಲಿನಲ್ಲಿ ಸಂಬಂದ ಪಟ್ಟ ಇಲಾಖೆಗೆ ಅರ್ಜಿಯನ್ನು ಕೊಟ್ಟಿರುತ್ತೇನೆ. ದಿನಾಂಕ ಯಾವುದು ಎಂದರೆ ಸಾಕ್ಷಿಯು ಜನವರಿ **2020** ಎನ್ನುತ್ತಾರೆ. ನಂತರ ಸುಮಾರು **5-6** ಬಾರಿ ನಾನು ಸದರಿ ಅರ್ಜಿಗಳನ್ನು ಕೊಟ್ಟಿರುತ್ತೇನೆ. ನಿರ್ದಿಷ್ಟವಾಗಿ ದಿನಾಂಕಗಳನ್ನು ಹೇಳಲಾಗುವುದಿಲ್ಲ. ಸದರಿ ಅರ್ಜಿಗಳ ಪ್ರತಿಗಳು ನನ್ನ ಬಳಿ ಇರುತ್ತದೆ. ಸದರಿ ಪ್ರತಿಗಳನ್ನು ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಯಾವ ರೀತಿ ದಾಖಲೆಗಳನ್ನು ಪಡೆದುಕೊಂಡಿದ್ದೆನೋ ಅದೇ ರೀತಿ ಈ ದಾವೆಯ **5** ನೇ ವಾದಿ ಕೂಡ ಅರ್ಜಿ ಕೊಟ್ಟು ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**4.** ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಈ ದಾವೆಯ ಫ್ರಾಸಾ **1** ನಾಗರಾಜು ಗೌಡರವರು ಕೊಟ್ಟ ನಿವೇದನೆ ಎಂದರೆ ನೋಡಿ ಒಪ್ಪುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿ.**249** ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಫ್ರಾಸಾ **1** ನಾಗರಾಜ ಗೌಡರ ಹೆಸರನ್ನು ನೋಡಿ ಗುರುತಿಸುತ್ತಾರೆ. ಸದರಿ ನಿವೇದನೆಯನ್ನು ಈಗ ನಿಪಿ.**250** ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**